ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/04/ಇಸಿಎಸ್(2)/2022


ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com


ದಿನಾಂಕ: 21.10.2022

## ಸುತ್ತೋಲೆ

ವಿಷಯ: ಸೆಪ್ಟೆಂಬರ್ 2022ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1. ನಿರ್ದೇಶಕರ ಜ್ಞಾಪನ ಸಂ: :ಬಿಟಿಇ/04/ಇಸಿಎಸ್(2)/2022 ದಿ:21.10.2022

2. ಸರ್ಕಾರಿ ಆದೇಶ ಸಂ:ಇಡಿ/57/ಟಿಪಿಇ/2013 ಬೆಂಗಳೂರು ದಿ: 17-04-2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೆಪ್ಟೆಂಬರ್ 2022 ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯವನ್ನು **ದಿನಾಂಕ: 27-10-2022 ರಂದು ವಿವಿಧ ನೋಡಲ್ ಪಾಲಿಟೆಕ್ನಿಕ್ ಕೇಂದ್ರಗಳಲ್ಲಿ** ನಡೆಸಲು ಕ್ರಮಕೈಗೊಳ್ಳಲಾಗಿದೆ ಹಾಗೂ ಕೆಳಕಂಡ ಬೋರ್ಡ್‌ವಾರು ವೇಳಾಪಟ್ಟಿಯಂತೆ ಮರುಮೌಲ್ಯಮಾಪನ ಕಾರ್ಯವನ್ನು ನಡೆಸಲು ನಿರ್ಧರಿಸಲಾಗಿದೆ. ಮರು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಉಪನ್ಯಾಸಕರ ಪಟ್ಟಿಯನ್ನು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್/ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಪಟ್ಟಿಯಲ್ಲಿ ನಮೂದಿಸಲಾಗಿರುವ ಉಪನ್ಯಾಸಕರನ್ನು ಕಡ್ಡಾಯವಾಗಿ ಸಂಬಂಧಪಟ್ಟ ಮರುಮೌಲ್ಯಮಾಪನ ಕೇಂದ್ರಕ್ಕೆ ನಿಯೋಜಿಸುವಂತೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಮರುಮೌಲ್ಯಮಾಪನ ಸಮಯದಲ್ಲಿ ಉಪನ್ಯಾಸಕರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪವೆಸಗುವ ಉಪನ್ಯಾಸಕರ ಮೇಲೆ ಉಲ್ಲೇಖಿತ ಸರ್ಕಾರಿ ಆದೇಶದ ಪ್ರಕಾರ ಕ್ರಮಕೈಗೊಳ್ಳಲಾಗುವುದು ಹಾಗೂ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಉಪನ್ಯಾಸಕರುಗಳು ಗೈರುಹಾಜರಾದರೆ, ಗೈರು ಹಾಜರಾದ ಅವಧಿಯ ವೇತನವನ್ನು ತಾಂತ್ರಿಕ ಪರೀಕ್ಷಾ ಮಂಡಳಿಯ 151ನೇ ಕೇಂದ್ರಿಯ ಸಭೆಯ ನಿರ್ಣಯ 151.3.5ರ ಅನ್ವಯ ಕಟಾಯಿಸಲಾಗುವುದು ಮತ್ತು ಮತ್ತು 171ನೇ ಕೇಂದ್ರೀಯ ಸಭೆಯ ನಿರ್ಣಯ 171.3.7(3) ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ಕಾರ್ಯ ವಿಮುಕ್ತಿಗೊಳಿಸದ ಪ್ರಿನ್ಸಿಪಾಲರುಗಳನ್ನು ಮುಂದಿನ ಆಗುಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

| ಕ್ರ.ಸಂ. | ಮರು ಮೌಲ್ಯಮಾಪನ ದಿನಾಂಕ | ಬೋರ್ಡ್‌ನ ಹೆಸರು |
|---|---|---|
| 1 | 27.10.2022 | AT, CE, CS, EC, EE, ME, SC, CP, ENG, AN, MC, MN, MT, MTT, PT, ADFT, AR, LT, CH, CHEMISTRY, CN, CR, EI,PO, TX, EN, Kannada and all allied branches |

ಕಾರ್ಯದರ್ಶಿ

21/10/22

ಇವರಿಗೆ:

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ

ಪ್ರತಿ: 1) ಇ-ಆಡಳಿತ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು

2)ಕಂಪ್ಯೂಟರ್ ವಿಭಾಗ - ಮರುಮೌಲ್ಯಮಾಪಕರ ಪಟ್ಟಿಯನ್ನು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು

3) ಆಯುಕ್ತರವರ ಆಪ್ತಶಾಖೆ

4) ನಿರ್ದೇಶಕರವರ ಆಪ್ತಶಾಖೆ

5) ಕಾರ್ಯದರ್ಶಿಯವರ ಆಪ್ತ ಶಾಖೆ

6) ಇಬಿಎಲ್ ವಿಭಾಗ